**ಕ್ರಿಮಿನಲ್ ಮಿಸ್ . ಸಂಖ್ಯೆ:37 /2023**
**ಪಿ.ಡಬ್ಲ್ಯೂ -01**

**ದಿನಾಂಕಃ 31.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು:- ಎದುರುದಾರರ ಪರ ಶ್ರೀ. ಎಸ್ ಎಸ್ ಡಿ.** ವಕೀಲರಿಂದ :-

ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಗುಮ್ಮಸಂದ್ರ ಮಾಗಡಿ ತಾಲ್ಲೂಕು ಎಂದು ವಿಳಾಸ ಹೇಳಿದ್ದು ಆ ಸಂಬಂಧ ಏನಾದರೂ ದಾಖಲೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಹೌದು ಚುನಾವಣಾ ಗುರುತಿನ ಚೀಟಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ-1 ರಿಂದ 17 ರ ದಾಖಲೆಗಳನ್ನು ತೋರಿಸಲಾಗಿ ಸದರಿ ಗುರುತಿನ ಚೀಟಿ ಎಲ್ಲಿ ಇದೆ ಎಂದರೆ ಸಾಕ್ಷಿ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಗುಮ್ಮಸಂದ್ರ ವಿಳಾಸದಲ್ಲಿ ವಾಸ ಇರುವುದರ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನಿಮಗೆ ತೊಂದರೆ ಇರುವುದಿಲ್ಲವಾ ಎಂದರೆ ಸಾಕ್ಷಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ಮತ್ತು ಅರ್ಜಿಗೆ ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಾನೇ ಎಂದು ನುಡಿಯುತ್ತಾರೆ. ಸದರಿ ಪ್ರಮಾಣಪತ್ರಕ್ಕೆ ಮತ್ತು ಅರ್ಜಿಗೆ ಎಲ್ಲಿ ಸಹಿ ಹಾಕಿರುತ್ತೀರಿ ಎಂದರೆ ಸಾಕ್ಷಿ ವಕೀಲರ ಕಛೇರಿಯಲ್ಲಿ ಎಂದು ನುಡಿಯುತ್ತಾರೆ. ನೀವು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಕಾನೂನು ಪದವಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಡಿಗ್ರಿ ನಂತರ ಕಾನೂನು ಪಧವಿ ಮಾಡಿರುತ್ತೀರೋ ಅಥವಾ ದ್ವಿತೀಯ ಪಿಯುಸಿ ನಂತರ ಕಾನೂನು ಪದವಿ ಮಾಡಿರುತ್ತೀರೋ ಎಂದರೆ ಸಾಕ್ಷಿ ಡಿಗ್ರಿ ಮಾಡಿದ ನಂತರ ಎಂದು ನುಡಿಯುತ್ತಾರೆ.

ನಿಮ್ಮ ವಿವಾಹದ ಕಾಲಕ್ಕೆ ನೀವು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಪೈನಲ್ ಇಯರ್ ಡಿಗ್ರಿ ಎಂದು ನುಡಿಯುತ್ತಾರೆ. ನೀವು ಕಾನೂನು ಪದವಿಗೆ ಪ್ರವೇಶ ಪಡೆಯುವಾಗ ಎಷ್ಟು ವರ್ಷಗಳ ಅಂತರ ಇತ್ತು ಎಂದರೆ ಸಾಕ್ಷಿ 10 ವರ್ಷ ಎಂದು ನುಡಿಯುತ್ತಾರೆ. ಈಗ ಎಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಎಲ್ಲೂ ಮಾಡುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮಗೆ ವಕೀಲ ವೃತ್ತಿ ನಡೆಸಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನಿಮ್ಮ ಮತ್ತು ಎದುರುದಾರರ ಪರಿಚಯ ಮೊದಲಭಾರಿಗೆ ಯಾವಾಗ ಆಗಿರುತ್ತದೆ ಎಂದರೆ ಸಾಕ್ಷಿ ಪರಿಚಯ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಯಾರಿಂದ ಎದುರುದಾರರು ಪರಿಚಯ ಆಗಿರುತ್ತಾರೆ ಎಂದರೆ ಸಾಕ್ಷಿ ನನ್ನ ತಾಯಿಯ ಸಂಬಂಧಿಕರಿಂದ ಎಂದು ನುಡಿಯುತ್ತಾರೆ. ಎದುರುದಾರರು ಏನು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸಾಕ್ಷಿ ಮೊದಲನೆ ಪಿಯುಸಿ ಎಂದು ನುಡಿಯುತ್ತಾರೆ. ಮದುವೆಯ ಮೊದಲು ನಿಶ್ಚಿತಾರ್ಥ ಆಗಿತ್ತ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾರ ಮನೆಯಲ್ಲಿ ಎಂದರೆ ಸಾಕ್ಷಿ ನಮ್ಮ ಮನೆಯಲ್ಲಿ ಎಂದು ನುಡಿಯುತ್ತಾರೆ. ಸದರಿ ನಿಶ್ಚಿತಾರ್ಥಕ್ಕೆ ಎಷ್ಟು ಖರ್ಚು ಆಗಿರುತ್ತದೆ ಎಂದರೆ ಸಾಕ್ಷಿ ರೂ.85 ರಿಂದ 90 ಸಾವಿರ ಎಂದು ನುಡಿಯುತ್ತಾರೆ.

ನಿಮ್ಮ ಮತ್ತು ಎದುರುದಾರರ ವಿವಾಹವು ಎಲ್ಲಿ ನಡೆದಿರುತ್ತದೆ ಎಂದರೆ ಸಾಕ್ಷಿ ಆರ್ ಆರ್ ಪ್ಯಾಲೇಸ್, ಮಾಗಡಿಯಲ್ಲಿ ಎಂದು ನುಡಿಯುತ್ತಾರೆ. ಮದುವೆಯ ಸಮಯದಲ್ಲಿ ಎದುರುದಾರರ ಮನೆಯಿಂದ ನಿಮಗೆ ಏನು ಆಭರಣ ಕೊಟ್ಟಿದ್ದರು ಎಂದರೆ ಸಾಕ್ಷಿ ಏನೂ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಏನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ 300 ಗ್ರಾಂ ಚಿನ್ನ ಕೊಟ್ಟಿದ್ದೆವು ಎಂದು ನುಡಿಯುತ್ತಾರೆ. ಮದುವೆಯ ಖರ್ಚನ್ನು ಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆಯವರು ಎಂದು ನುಡಿಯುತ್ತಾರೆ. ಎಷ್ಟು ಖರ್ಚು ಆಗಿರುತ್ತದೆ ಎಂದರೆ ಸಾಕ್ಷಿ ರೂ.12ಲಕ್ಷಎಂದು ನುಡಿಯುತ್ತಾರೆ. ಸದರಿ 300ಗ್ರಾಂ ಚಿನ್ನ ಕೊಟ್ಟ ಬಗ್ಗೆ ಹಾಗೂ ರೂ.12 ಲಕ್ಷ ಖರ್ಚು ಮಾಡಿದ ಬಗ್ಗೆ ನಿಮ್ಮ ಅರ್ಜಿಯಲ್ಲಿ ಎಲ್ಲೂ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಚಿನ್ನ ಕೊಟ್ಟ ಬಗ್ನ್ಗ ಹೇಳಿರುತ್ತೇವೆ ಆದರೆ ಹಣ ಖರ್ಚು ಮಾಡಿದ ಬಗ್ಗೆ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು 300 ಗ್ರಾಂ ಚಿನ್ನ ಹಾಗೂ ರೂ.12ಲಕ್ಷ ಹಣವನ್ನು ಖರ್ಚು ಮಾಡಿರುವುದಿಲ್ಲ ಆ ಕಾರಣದಿಂದಲೇ ನೀವು ಸದರಿ ವಿಷಯವನ್ನು ನಿಮ್ಮ ಅರ್ಜಿಯಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಎದುರುದಾರರು ಒಟ್ಟು ರೂ.15ಲಕ್ಷ ಹಣವನ್ನು ಖರ್ಚು ಮಾಡಿ ಹಾಗೂ ನಿಮಗೆ 400 ಗ್ರಾಂ ಚಿನ್ನವನ್ನು ಕೊಟ್ಟು ವಿವಾಹ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.** ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.